

# ಮಕರಂದ

2023-2024




# ಶಾಲಾ ಸ್ಥಾಪನೆಯ ವಿವರಣೆ

ತೆಂಕು ತಿಟ್ಟಿನ ಯಕ್ಷಗಾನಾಗಸದಲ್ಲಿ ಕುರಿಯ ವಿಠಲ ಶಾಸ್ತ್ರಿ ಧ್ರುವತಾರೆಯಂತೆ . ಅವರ ದಿವ್ಯ ಸ್ಮಾರಕವಾಗಿ ಕುರಿಯ ವಿಠಲ ಶಾಸ್ತ್ರಿರ ಸ್ಮಾರಕ ಪ್ರೌಢ ಶಾಲೆಯು ಕ್ರಿ .ಶ .೧೯೮೨ರಲ್ಲಿ ಸ್ಥಾಪನೆಗೊಂಡಿತು . ಆ ಮೂಲಕ ಅದು ನಾಡಿನ ವಿದ್ಯಾಸಕ್ತರಿಗೆ ಆಡುಂಬೊಲವಾಯಿತು . ಕುರಿಯ ರಾಮಶಾಸ್ತ್ರಿ ವಿದ್ಯಾಲಯದ ಸ್ಥಾಪಕ ಸಂಸ್ಥಾಪಕರು . ಕುಡಿಯಮೂಲೆ ಶಂಕರನಾರಾಯಣ ಭಟ್ ಸ್ಥಾಪಕ ಮುಖ್ಯೋಪಾಧ್ಯಾಯರು . ಊರಿನ ಹತ್ತು ಸಮಸ್ತರ ದುಡಿತದ ಫಲವಾಗಿರುವ ಈ ಸಂಸ್ಥೆಯು ಉತ್ತಮ ಪರಿಸರದಲ್ಲಿ ತಲೆಯೆತ್ತಿ ನಿಂತಿದೆ . ಉತ್ತಮ ಗುಣಮಟ್ಟದ ಶಿಕ್ಷಣದ ಜೊತೆಗೆ ವಿದ್ಯಾರ್ಥಿಗಳ ಸರ್ವತೋಮುಖ ಬೆಳವಣೆಗೆಗೆ ಅವಕಾಶ ನೀಡುತ್ತಾ ಬರುವುದು ಈ ಸಂಸ್ಥೆಯ ಉದ್ದೇಶ .

ಪ್ರಸ್ತುತ ಕುರಿಯ ಗೋಪಾಲಕೃಷ್ಣ ಭಟ್ ಶಾಲಾ ಮೆನೇಜರ್ ಆಗಿ ವಿದ್ಯಾಲಯದ ಅಭಿವೃದ್ಧಿಗೆ ಶ್ರಮಿಸುತ್ತಿದ್ದಾರೆ . ಮುಖ್ಯೋಪಾದ್ಯಾಯಿನಿ ಸಹಿತ ಏಳು ಮಂದಿ ಬೋಧಕ ವರ್ಗ ಮತ್ತು ನಾಲ್ಕು ಮಂದಿ ಬೋಧಕೇತರ ಸಿಬ್ಬಂದಿ ಇಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ.

# 2023-2024 ರಲ್ಲಿ ರಾಜ್ಯಮಟ್ಟಕ್ಕೆ ಆಯ್ಕೆಯಾದ ಶಾಲಾ ಪ್ರತಿಭೆಗಳು

## 2023-2024 ರಾಜ್ಯ ಮಟ್ಟದ ಕ್ರೀಡಾ ಸಾಧನೆ

ನಮ್ಮ ಶಾಲಾ ಕ್ರೀಡಾ ಇತಿಹಾಸಕ್ಕೆ ಈ ವರ್ಷ ಇನ್ನೆರಡು ಸಾಧನೆಗಳು ಸೇರಿಕೊಂಡವು.

ಸಬ್ ಜೂನಿಯರ್ ಹುಡುಗಿಯರ ಖೋಖೋ ಮತ್ತು ಸಬ್ ಜೂನಿಯರ್ ಹುಡುಗರ ಡಿಸ್ಕಸ್ ತ್ರೋ 14 ವರ್ಷದೊಳಗಿನ ಕ್ರಿಕೆಟ್ ಪಂದ್ಯಾಟದಲ್ಲಿ ರಾಜ್ಯಮಟ್ಟದಲ್ಲಿಸಾಧನೆಗೈದು ಪ್ರಶಂಸಾಪತ್ರಗಳನ್ನು ತಮ್ಮದಾಗಿಸಿಕೊಂಡರು.



**ವರ್ಷ:-** ಕೊಮ್ಮಂಗಳ ವಿಶ್ವನಾಥ, ಜಾನಕಿ ಇವರ ಪುತ್ರಿಯಾದ 8 ನೇ ತರಗತಿಯ ಕುಮಾರಿ ವರ್ಷ ಸಬ್ ಜೂನಿಯರ್ ಹುಡುಗಿಯರ ಖೋ ಖೋ ಪಂದ್ಯಾಟದಲ್ಲಿ ಕಾಸರಗೋಡು ತಂಡವನ್ನು ರಾಜ್ಯಮಟ್ಟದಲ್ಲಿ ಪ್ರತಿನಿಧಿಸಿರುತ್ತಾಳೆ.



<u>ಮೊಹಮ್ಮದ್ ಮುಹಾದ್ : -</u>9 ನೇ ತರಗತಿ. ಆನೆಕಲ್ಲು ಛತ್ರದ ಅಬ್ದುಲ್ ಹಮೀದ್ ಮತ್ತು ಆಯಿಷಾ ದಂಪತಿಗಳ ಪುತ್ರನಾದ ಈತ ಜಿಲ್ಲಾಮಟ್ಟದ ಡಿಸ್ಕಸ್ ತ್ರೋದಲ್ಲಿ ಪ್ರಥಮ ಸ್ಥಾನ ಪಡೆದು ತ್ರಿಶೂರ್ ನಲ್ಲಿ ನಡೆದ ರಾಜ್ಯಮಟ್ಟದ ಡಿಸ್ಕಸ್ ತ್ರೋದಲ್ಲಿ ಉತ್ತಮ ಪ್ರದರ್ಶನ ನೀಡಿರುತ್ತಾನೆ.ಕಾಸರಗೋಡು ಜಿಲ್ಲೆಯ ಕೀರ್ತಿಯನ್ನು ಹೆಚ್ಚಿಸಿದ್ದಾನೆ. ಅಂತೆಯೇ 14ವರ್ಷದೊಳಗಿನ ಕ್ರಿಕೆಟ್ ಪಂದ್ಯಾಟದಲ್ಲಿ ರಾಜ್ಯಮಟ್ಟದಲ್ಲಿ 6ನೇ ಸ್ಥಾನವನ್ನು ಪಡೆದಿರುತ್ತಾನೆ.

ನಮ್ಮ ಶಾಲೆಯ ವಿದ್ಯಾರ್ಥಿಗಳು ರಚಿಸಿದಂತಹ ಕೃತಿಗಳು



# ಮುಸ್ಸಂಜೆ

ನಾನು ಕುಳಿತೆ ಮನೆಯ
ಮೆಟ್ಟಿಲಲ್ಲಿ......
ಮಳೆ ಬೀಳುವ
ಹೊತ್ತಲಿ......
ಪ್ರಕೃತಿ ಕತ್ತಲಿನಂತೆ ಕಪ್ಪಾಯಿತು
ಮುಸ್ಸಂಜೆಯಲಿ
ನಗು ಚಂದ್ರನು ಇಣುಕುವನು
ಮೋಡದೆಡೆಯಲಿ
ಏನೋ ಒಂದು ಸಂತೋಷ
ಹೊರಗೆ ಸಿಗುವ ಚಳಿಯಲ್ಲಿ......
ಈ ಸೌಂದರ್ಯ ವರ್ಣಿಸಲಾಗದು
ಬಾಯಿ ಮಾತಲಿ......

ರಚನೆ:

ರಶ್ಮಿತ ೧೦ನೇ ತರಗತಿ

# ಬಾತು ಕೋೞಿ ಮತ್ತು ಕಾಗೆ

**ಒಂದು** ಸಾರಿ ಒಂದು ಬಾತುಕೋೞಿ ಮತ್ತು ಒಂದು ಕಾಗೆ ಅಂಜೂರದ ಗಿಡದ ಮೇಲೆ ಕುಳಿತಿದ್ದವು. ಸುಡು ಬೇಸಿಗೆಯ ಅಪರಾಹ್ನದಲ್ಲಿ ಒಬ್ಬ ಪ್ರಯಾಣಿಕ ಅಲ್ಲಿಗೆ ಬಂದ.ಬಿಸಿಲ ಝಳಕ್ಕೆ ಸುಸ್ತಾದ ಆತ ಗಿಡಕ್ಕೆ ವಂದಿಸುತ್ತಾ ಬಿಲ್ಲು, ಬಾಣಗಳನ್ನು ಪಕ್ಕದಲ್ಲಿಟ್ಟು ನಿದ್ರೆ ಹೋದ. ಸ್ವಲ್ಪ ಸಮಯದ ನಂತರ ನೆರಳು ಮುಂದೆ ಸರಿಯಿತು ಈಗ ಬಿಸಿಲು ನೇರವಾಗಿ ಆತನ ಮುಖದ ಮೇಲೆ ಬೀಳುತ್ತಿತ್ತು.

ಕೊಂಬೆಯ ಮೇಲೆ ಕುಳಿತಿದ್ದ ಬಾತುಕೋೞಿ ಇದನ್ನು ನೋಡಿತು. ತನ್ನ ರೆಕ್ಕೆಗಳನ್ನು ವಿಶಾಲವಾಗಿ ಹರಡಿ ಆತನಿಗೆ ನೆರಳು ಸಿಗುವಂತೆ ಮಾಡಿತು. ಬಾತುಕೋೞಿಯ ಈ ಸಹಾಯದ ಅರಿವಿಲ್ಲದೆ ಆತ ಹಾಯಾಗಿ ಮಲಗಿದ.

ಕಾಗೆ ಇದನ್ನು ಗಮನಿಸಿತ್ತು. ಯಾರಾದರೂ ಇನ್ನೊಬ್ಬರಿಗೆ ಸಹಾಯ ಮಾಡುವುದನ್ನು ಕಂಡರೆ ಅದು ಸಹಿಸುತ್ತಿರಲಿಲ್ಲ . ಅದು ಹಾಯಾಗಿ ಮಲಗಿದ್ದ ಆ ಮನುಷ್ಯನ ಮೇಲೆ ಮಲ ವಿಸರ್ಜಿಸಿತು . ಅಲ್ಲಿಂದ ಜಾಗ ಖಾಲಿ ಮಾಡಿತು. ತಕ್ಷಣ ಎದ್ದ ಆ ಮನುಷ್ಯ ಸುತ್ತಮುತ್ತಲೂ ನೋಡಿದ. ಇದು ಬಾತುಕೋೞಿಯದೇ ಕೆಲಸ ಎಂದು ಭಾವಿಸಿ ಗುರಿಯಿಟ್ಟು ಬಾಣಬಿಟ್ಟ ಬಾತುಕೋೞಿ ಸತ್ತು ಕೆಳಗೆ ಬಿದ್ದಿತು.


ಸ್ವಾತಿ

೧೦ ನೇ ತರಗತಿ

ಕೆ.ವಿ.ಎಸ್.ಎಂ.ಎಚ್.ಎಸ್.ಕುರುಡಪದವು




# ಬೆಳದಿಂಗಳ ರಾತ್ರಿ

ಕುಳಿತಿದ್ದೆ ಬೆಳದಿಂಗಳ ರಾತ್ರಿಯಲ್ಲಿ
ಆ ಚಂದ್ರನ ಬಿಂಬವ ಸವಿಯುತಲಿ
ಕವನ ಬರೆವ ತವಕ ಮನಸಿನಲ್ಲಿ
ಬಡಿತ ಹೆಚ್ಚಿತು ಹೃದಯದಲ್ಲಿ

ಅಪರಿಚಿತರೊಬ್ಬರು ಬರೆದ ಕವನದಲಿ
ಬಾವನೆ ತುಂಬಿತ್ತು ಪ್ರತಿಯೊಂದು ಸಾಲಿನಲಿ
ಆ ಸಾಲು ಕುಳಿತ್ತಿತ್ತು ನನ್ನ ಮನದಲಿ
ನೀರು ತುಂಬಿತ್ತು ನನ್ನ ಕಣ್ಣಂಚಿನಲಿ

ಭಾವುಕಳಾಗಿದ್ದೆ ಆ ಕ್ಷಣದಲಿ
ಮುಳುಗಿದ್ದೆ ಆ ಕವನದಲ್ಲಿ
ಮನ ತಿರುಗಿತು ಚಂದ್ರನ ನೊಡುವಲ್ಲಿ
ಕಲ್ಲಾಗಿದ್ದೆ ಒಂದು ಕ್ಷಣ ಅವನ ಕಾಂತಿಯಲಿ

ಎಷ್ಟೊಂದು ಸುಂದರ ಅನುಭವ ಚಂದ್ರನಲಿ
ಅವನ ನೋಡುತ ಮುಳುಗಿದ್ದೆ ಭಾವದ ಮರೆಯಲಿ
ಕವನ ಓದುತ್ತಿರುವೆ ಬೆಳದಿಂಗಳ ರಾತ್ರಿಯಲಿ
ಕವನ ಬರೆವ ತವಕ ಮರಳಿ ಮರಳಿ...

ರಚನೆ :

ರಶ್ಮಿತ

೧೦ ನೇ ತರಗತಿ

# ಸುದಿನ

ಇತ್ತೊಂದು ಶಾಲಾ ಮೇಳ ಕಡಂಬಾರಿನಲಿ
ಹೋದೆವು ನಾವು ಶಾಲಾ ವಾಹನದಲಿ
ಇಳಿದೆವು ನಾವು ಗುವೆದಪಡ್ಪಿನಲಿ
ಇದ್ದರಲ್ಲಿ ನಮ್ಮ ಸ್ನೇಹಿತರು ಕಾತುರದಲಿ

ಸಿಕ್ಕಿತು ಮಹಾಲಿಂಗ ಬಸ್ಸು ಸ್ವಲ್ಪ ಹೊತ್ತಿನಲಿ
ನಿಂತೆವು ನಾವು ಆ ರಶ್ಶಿನಲಿ
ಕಾಣಲಿಲ್ಲ ಟೀಚರ್ ಆ ವೇಳೆಯಲಿ
ಹುಡುಕುತ ಇಣುಕಿದೆವು ಭಯದಲಿ

ಅಂತು ಇಂತು ಇಳಿದೆವು ಕಡಂಬಾರಿನಲಿ
ಕವನ ಬರೆದ ತವಕದಲಿ
ಹಸಿವಿನ ತೊಲಳಾಟದಲಿ
ತಿಂಡಿ ತಿಂದೆವು ಗೆಳತಿಯರ ಗುಂಪಿನಲಿ

ಕುಳಿತೆವು ನಾವು ತರಗತಿಯಲಿ
ಅಧ್ಯಾಪಕರು ಬರಲಿಲ್ಲ ಆ ವೇಳೆಯಲಿ
ಯಾರು ಬರದ ಆ ಹೊತ್ತಿನಲಿ
ಈ ಕವನ ಬರೆದೆ ನನ್ನ ಪುಸ್ತಕದಲಿ

ರಚನೆ
ರಶ್ಮಿತ ೧೦ ನೇ ತರಗತಿ



# ಪರಿಸರ ಸಂರಕ್ಷಣೆ

ಪರಿಸರವನ್ನು ಸಂರಕ್ಷಿಸುವುದು ನಮ್ಮೆಲ್ಲರ ಕರ್ತವ್ಯವಾಗಿದೆ. ಪರಿಸರವನ್ನು ಶುಚಿಯಾಗಿಡುವುದರಿಂದ ನಮಗೆ ಹಲವಾರು ಪ್ರಯೋಜನಗಳಿವೆ. ನಮ್ಮ ಬೇಜವಾಬ್ದಾರಿಯಿಂದ ಉಂಟಾಗುವ ಪರಿಸರ ಮಾಲಿನ್ಯವು ಹಲವಾರು ರೋಗಗಳನ್ನು ಉಂಟುಮಾಡಬಹುದು.ಪರಿಸರ ಸಂರಕ್ಷಣೆಗೆ ಹಲವಾರು ಕ್ರಮಗಳನ್ನು ಕೈಗೊಳ್ಳಬೇಕು. ಪರಿಸರದ ಸ್ವಚ್ಛತೆಯು ನಮ್ಮ ಆರೋಗ್ಯವನ್ನು ಉತ್ತಮಪಡಿಸುತ್ತದೆ.

ನಮ್ಮ ಸುತ್ತುಮುತ್ತಲಿನ ಪರಿಸರವನ್ನು ಶುಚಿಯಾಗಿಟ್ಟುಕೊಳ್ಳಬೇಕು.ಪರಿಸರದಲ್ಲಿರುವ ಕಸಕಡ್ಡಿಗಳನ್ನು ಅನಗತ್ಯವಸ್ತುಗಳನ್ನು ತಿಪ್ಪೆಗೆ ಹಾಕಬೇಕು.ಮುಖ್ಯವಾಗಿ ಪ್ಲಾಸ್ಟಿಕ್ ವಸ್ತುಗಳನ್ನು ಪರಿಸರಕ್ಕೆ ಎಸೆಯಲೇಬಾರದು;ಯಾಕೆಂದರೆ ಪ್ಲಾಸ್ಟಿಕ್ ವಸ್ತುಗಳು ಮಣ್ಣಿನಲ್ಲಿ ಕೊಳೆಯುವುದಿಲ್ಲ.

ವನಮಹೋತ್ಸವವು ಪರಿಸರ ಸಂರಕ್ಷಣೆಯ ಮುಖ್ಯ ಅಂಗವಾಗಿದೆ.ಮರಗಳನ್ನು ನೆಟ್ಟು ಬೆಳೆಸುವುದರಿಂದ ವಾತಾವರಣದ ಹವೆಯು ತಂಪಾಗುತ್ತದೆ. ವಾತಾವರಣದಲ್ಲಿ ಅಂಗಾರಾಮ್ಲದ ಅಂಶವು ಕಡಿಮೆಯಾಗುತ್ತದೆ.

ಜಲಮಾಲನ್ಯ,ನೆಲಮಾಲಿನ್ಯ,ವಾಯುಮಾಲಿನ್ಯ -ಇವುಗಳು ಪರಿಸರ ಮಾಲಿನ್ಯವನ್ನುಂಟುಮಾಡುತ್ತವೆ.ಕಾರ್ಖಾನೆಗಳಿಂದ ಉಂಟಾಗುವ ತ್ಯಾಜ್ಯವಸ್ತುಗಳನ್ನು ಸಮುದ್ರಕ್ಕೆ ಬಿಡುವುದರಿಂದ ಜಲಮಾಲಿನ್ಯ ಉಂಟಾಗುತ್ತದೆ.ಕಸಕಡ್ಡಿಗಳನ್ನು,ಅನಗತ್ಯ ವಸ್ತುಗಳನ್ನು ಪರಿಸರಕ್ಕೆ ಎಸೆಯುವುದರಿಂದ ನೆಲಮಾಲಿನ್ಯ ಉಂಟಾಗುತ್ತದೆ. ವಾಹನಗಳಿಂದ,ಕಾರ್ಖಾನೆಗಳಿಂದ ಬರುವ ಹೊಗೆಯು ವಾತಾವರಣಕ್ಕೆ ಬಿಡುಗಡೆಗೊಂಡು ವಾಯು ಮಾಲಿನ್ಯ ಉಂಟಾಗುತ್ತದೆ.

ಪರಿಸರ ಮಾಲಿನ್ಯವು ಹಲವಾರು ರೋಗಗಳನ್ನು ಹರಡಬಹುದು.ಪರಿಸರದಲ್ಲಿ ಹರಿಯುವ ನೀರು ತಡೆಗಟ್ಟಿನಿಂತು ಅದರಲ್ಲಿ ಉಂಟಾಗುವ ಸೂಕ್ಷ್ಮಜೀವಿಗಳು ಸೋಂಕುರೋಗವನ್ನು ಹರಡುತ್ತವೆ.ಸೂಕ್ಷ್ಮಾಣು ಜೀವಿಗಳ ಸೋಂಕು ಸಾಂಕ್ರಾಮಿಕ ರೋಗಗಳನ್ನುಂಟುಮಾಡುತ್ತವೆ.

ಪರಿಸರ ಸಂರಕ್ಷಣೆಗಾಗಿ ಸರಕಾರವು ಹಲವಾರು ಕ್ರಮಗಳನ್ನು ಕೈಗೊಂಡಿದೆ. ರಸ್ತೆಗಳ ಬದಿಯಲ್ಲಿ ಇರುವ ಕಸಕಡ್ಡಿಗಳ ರಾಶಿಯನ್ನು ಪ್ರಾಣಿಗಳ ಶವಗಳನ್ನು,ಅನಗತ್ಯವಸ್ತುಗಳನ್ನು ಸುಡುವ ಅಥವಾ ದಫನ ಮಾಡುವ ವ್ಯವಸ್ಥೆ ಇರಬೇಕು.

.

ನಮ್ಮ ಮನೆಯ ಪರಿಸರವನ್ನು ಸಂರಕ್ಷಣೆ ಮಾಡುವಂತೆಯೇ ಪರಿಸರವನ್ನು ಸಂರಕ್ಷಿಸಬೇಕು.ಪರಿಸರದ ಸ್ವಚ್ಛತೆಯಿಂದ ನಮ್ಮ ಶರೀರವು ಆರೋಗ್ಯದಿಂದಿರುತ್ತದೆ.ನಮ್ಮ ಸುತ್ತು-ಮುತ್ತಲ ಪರಿಸರದಲ್ಲಿ ಗಿಡ-ಮರಗಳನ್ನು ಬೆಳೆಸಬೇಕು.ಪರಿಸರದ ಹಾನಿಯು ಮಾನವ ಕುಲವನ್ನೇ ಬಾಧಿಸುತ್ತದೆ.ಪರಿಸರದ ಸಂರಕ್ಷಣೆಗಾಗಿ ಸರಕಾರವು ಅನೇಕ ಸಂಘಸಂಸ್ಥೆಗಳನ್ನು ಸ್ಥಾಪಿಸಿದೆ.ಪ್ರಾಕೃತಿಕ ಸಂಪತ್ತುಗಳಲ್ಲಿ ಒಂದಾದ ಪರಿಸರವನ್ನು ನಾವು ಸಂರಕ್ಷಿಸಬೇಕು.



ರಚನೆ:

ಶ್ರೀದೇವಿ.ಯಂ

೯ ನೇ ತರಗತಿ



## ನಮ್ಮ ಶಾಲಾ

## ವಿದ್ಯಾರ್ಥಿಗಳ ಚಿತ್ರಕಲೆಗಳು



ರಚನೆ;ರಕ್ಷಾ
೮ ನೇ ತರಗತಿ



ರಚನೆ:ಪಲ ವಿ
೮ ನೇ ತರೆಗತಿ



ರಚನೆ ನಿಶಿತ
೯ ನೇ ತರಗತಿ

# ನಮ್ಮ ಶಾಲೆಯಲ್ಲಿ ನಡೆದ ಜೀವ ವೈವಿಧ್ಯ ಶಿಬಿರ

## ಜೀವ ವೈವಿಧ್ಯತೆ ಅಧ್ಯಯನ ಶಿಬಿರ




**ಉಪ್ಪಳ:** ಕಾಸರಗೋಡು ಜಿಲ್ಲಾ ಇಕೋ ಕ್ಲಬ್ ನೇತೃತ್ವದಲ್ಲಿ ಕುರುಡಪದವು ಕುರಿಯ ವಿಠಲ ಶಾಸ್ತ್ರಿ ಮೆಮೋರಿಯಲ್ ಹೈಸ್ಕೂಲ್‌ನಲ್ಲಿ ಒಂದು ದಿನದ ಜೀವ ವೈವಿಧ್ಯ ತಿಳಿವಳಿಕೆ ಶಿಬಿರ ಆಯೋಜಿಸಲಾಯಿತು.

ಚಿಪ್ಪಾರು ಎಯುಪಿ ಶಾಲೆ, ಬಾಕ್ರಬೈಲ್ ಎಯುಪಿ ಶಾಲೆ, ಕುರುಡಪದವು ಎಯುಪಿ ಶಾಲೆಯ ಇಕೋ ಕ್ಲಬ್‌ನ ಸುಮಾರು ಎಂಬತ್ತು ಸ್ವಯಂ ಸೇವಕರು ಭಾಗವಹಿಸಿದ್ದರು. ಯುವ ಪಕ್ಷಿ ನಿರೀಕ್ಷಕ ಕಾರ್ಳೆ ಪ್ರಣವ್ ಭಂಡಾರಿ ಮತ್ತು ಪೂರ್ಣಪ್ರಜ್ಞ ಪುತ್ತೂರು ಸಂಪನ್ಮೂಲ ವ್ಯಕ್ತಿಗಳಾಗಿ ಭಾಗವಹಿಸಿ ಶಾಲೆ ಸಮೀಪದ ಜೀವ ವೈವಿಧ್ಯ ತಾಣವಾದ ಕೊಮ್ಮಂಗಳ ಮತ್ತು ಸುತ್ತಮುತ್ತಲಿನ ಪರಿಸರದ ಜೀವ ವೈವಿಧ್ಯವನ್ನು ವೈಜ್ಞಾನಿಕವಾಗಿ ಪರಿಚಯಿಸಿ ಮಹತ್ವದ ಕುರಿತು ಮಾಹಿತಿ ನೀಡಿದರು.

ಶಿಬಿರದಲ್ಲಿ ಭಾಗವಹಿಸಿದ ಇಕೋ ಕ್ಲಬ್ ಸ್ವಯಂ ಸೇವಕರಿಗೆ ಪ್ರಮಾಣ ಪತ್ರಗಳನ್ನು ವಿತರಿಸಲಾಯಿತು. ಶಾಲಾ ವ್ಯವಸ್ಥಾಪಕ ಗೋಪಾಲಕೃಷ್ಣ ಭಟ್ ಪ್ರಮಾಣಪತ್ರ ವಿತರಿಸಿ ಶುಭ ಹಾರೈಸಿದರು. ಮುಖ್ಯ ಶಿಕ್ಷಕಿ ಗಾಯತ್ರಿ ಕೆ. ಮಾತನಾಡಿ, ಜೀವ ವೈವಿಧ್ಯತೆಯ ಸಂರಕ್ಷಣೆಯ ಅಗತ್ಯದ ಬಗ್ಗೆ ತಿಳಿಸಿದರು. ಇಕೋ ಕ್ಲಬ್ ಸಂಚಾಲಕಿ, ಶಿಕ್ಷಕಿ ಸುಪ್ರಿಯ ವಂದಿಸಿದರು.

VK ವಿಜಯ ಕರ್ನಾಟಕ VIJAY KARNATAKA




GOVERNMENT OF INDIA MINISTRY OF
ENVIRONMENT AND FORESTS
NATIONAL GREEN CROPS - ECO CLUB
KASARAGOD
ರಾಷ್ಟ್ರೀಯ ಹಸಿರು ಸೇನೆ
KVSMHS KURUDAPADAVU
REDMI NOTE 9
AI QUAD CAMERA

PREPARED BY

THANUSHREE
SHANVI. K
MANVITHA. G. S

GUIDED BY

GAYATRI .K [HEADMISTRESS]
RAMAKRISHNA PRASAD.A [SITC]
SALILA KUMARI.V.K [LK MASTER]
SUPRIYA.M.K[LK MISTRESS]

K.V.S.M.H.S.
KURUDAPADAVU



